ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,
ಚನ್ನರಾಯಪಟ್ಟಣ

**ಸಿಸಿ ನಂ .144/2025**

**ಪಿರ್ಯಾದುದಾರರು** :- **-ವಿರುದ್ಧ -** **ಆರೋಪಿತ** :-

ರವಿ

ಕೆ.ಎಂ.ನಂಜೇಗೌಡ,
ಬಿನ್ ಮಂಜೇಗೌಡ,
40 ವರ್ಷ,
ವಾಸಃ ಕೊತ್ತನಘಟ್ಟ ಗ್ರಾಮ,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.
ಹಾಗೂ ಬ್ಯಾಟರಿ ಶಾಪ್ ಮಾಲೀಕರು,
ಶ್ರವಣಬೆಳಗೊಳ ನಾಡಕಚೇರಿ ಎದುರು,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

ಹೆಚ್.ಕೆ.ನವೀನ, ಎಲ್.ಎಲ್.ಬಿ., ಎಲ್.ಎಲ್.ಎಂ., ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಚನ್ನರಾಯಪಟ್ಟಣ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

:: **ಆಪಾದನೆ** ::

ಆರೋಪಿಯಾದ ನೀವು ಹಾಗೂ ಪಿರ್ಯಾದುದಾರರು ಪರಿಚಯಸ್ಥರಾಗಿದ್ದು, ನಿಮ್ಮ ದರ್ದು ನಿಮಿತ್ತ ಅಂದರೆ ವ್ಯವಹಾರದ ಉದ್ದೇಶಕ್ಕಾಗಿ ಪಿರ್ಯಾದಿಯನ್ನು 2024ನೇ ಮೇ ಮಾಹೆ ಮೊದಲನೆಯ ವಾರದಲ್ಲಿ ಭೇಟಿ ಮಾಡಿ ರೂ.3,90,000/- ಗಳನ್ನು ಸಾಲವಾಗಿ ಕೇಳಲಾಗಿ ಪಿರ್ಯಾದುದಾರರು ಆರೋಪಿಗೆ ದಿನಾಂಕಃ 09.05.2024 ರಂದು ರೂ.3,90,000/- ಗಳನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ ಆರೋಪಿಯಾದ ನೀವು ಖಾತೆ ಹೊಂದಿರುವ ಫೆಡರಲ್ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್

ನಂ.**220042** ನ್ನು ಮುಂಗಡ ದಿಃ 09.05.2025 ಎಂದು ನಮೂದಿಸಿ ಪಿರ್ಯಾದಿಗೆ ನೀಡಿದ್ದು, ಪಿರ್ಯಾದಿ ದಿನಾಂಕಃ 09.05.2025 ರಂದು ಹಣ ಪಡೆಯುವ ಸಲುವಾಗಿ ತಾನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'Funds Insufficient' ಎಂಬ ಹಿಂಬರಹದೊಂದಿಗೆ ದಿಃ 17.05.2025 ರಂದು ಚೆಕ್ಕನ್ನು ವಾಪಸ್ ನೀಡಿದ್ದು ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ 27.05.2025 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ಆರೋಪಿಗೆ ದಿನಾಂಕಃ 31.05.2025 ಮತ್ತು 12.06.2025 ರಂದು 2 ನೋಟೀಸ್ ಜಾರಿಯಾಗಿದ್ದು, ನೀವು ಈವರೆಗೂ ಹಣವನ್ನು ವಾಪಸ್ಸು ಮಾಡಿರುವುದಿಲ್ಲ. ಆ ಕಾರಣಕ್ಕಾಗಿ ಕಲಂ 138 ವರ್ಗಾವಣೀಯ ಲಿಖಿತಗಳ ಅಧಿನಿಯಮ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ಒಳಗೆ ಮಾಡಿರುವಿರಿ.

ನಿಮ್ಮ ಮೇಲೆ ಮೇಲ್ಕಂಡ ದಂಡನೀಯ ಆಪಾದನೆಗಳ ವಿಚಾರಣೆ ಈ ನ್ಯಾಯಾಲಯದ ಮುಂದೆ ನಡೆಯತಕ್ಕದೆಂದು ನಿರ್ದೇಶಿಸುತ್ತೇನೆ.

1) ಪ್ರಶ್ನೆಃ–ಈಗ ನಿಮಗೆ ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?

ಉತ್ತರಃ–

2) ಪ್ರಶ್ನೆಃ– ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾಗಿದೆಯೇ?

ಉತ್ತರಃ–

ದಿನಾಂಕಃ 13.07.2026 ರಂದು ಆರೋಪಿತನಿಗೆ ಆಪಾದನೆಗಳ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಮತ್ತು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಹೆಚ್.ಕೆ.ನವೀನ)**
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಚನ್ನರಾಯಪಟ್ಟಣ.